ಗಂಧದೆಣ್ಣೆ ಕಾರ್ಖಾನೆಗಳ ಬಗ್ಗೆ

ಶ್ರೀಮತಿ ಲೀಲಾವತಿ ಆರ್. ಪ್ರಸಾದ್ (ಅಥಣಿ)

ಮಾನ್ಯ ಗೃಹಕೈಗಾರಿಕೆ ಮತ್ತು ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪ್ರತಿ ವರ್ಷ ತಯಾರಾಗುತ್ತಿರುವ ಗಂಧದೆಣ್ಣೆಯ ಪ್ರಮಾಣವೆಷ್ಟು?

ಆ) ಶಿವಮೊಗ್ಗ ಮತ್ತು ಮೈಸೂರಿನಲ್ಲಿರುವ ಗಂಧದೆಣ್ಣೆ ಕಾರ್ಖಾನೆಗಳು ಕಾರ್ಯ ನಡೆಸುತ್ತಿದೆಯೇ?

ಇ) ಅವುಗಳು ಎಷ್ಟು ಪ್ರಮಾಣದ ಎಣ್ಣೆಯನ್ನು ಉತ್ಪಾದಿಸುತ್ತಿವೆ?

ಶ್ರೀ ಜೆ ಹೆಚ್. ಪಟೀಲ್ (ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ತಯಾರಾಗುತ್ತಿರುವ ಗಂಧದೆಣ್ಣೆಯ ಪ್ರಮಾಣ ಈ ಕೆಳಗಿನಂತಿದೆ.

	ಕೆ.ಜಿ.ಗಳಲ್ಲಿ
ಅಕ್ಟೋಬರ್ ೧೯೮೦ರಿಂದ	
ಮಾರ್ಚ್ ೧೯೮೧ರವರೆಗೆ	೪೫,೩೫೧
೧೯೮೧–೮೨	೨೨,೩೬೫
೧೯೮೨–೮೩	೬೨.೮೦೩
೧೯೮೩–೮೪	೫೮.೬೯೭
೧೯೮೪–೮೫	೪೯,೮೮೦
೧೯೮೫–೮೬	೫೫,೩೯೦
೧೯೮೬–೮೭	೩೬,೯೪೫ (ತಾತ್ಕಾಲಿಕ)
೧೯೮೭–೮೮ (ಡಿಸೆಂಬರ್ ೮೭ರವರೆಗೆ)	೧೧,೭೧೫ (ತಾತ್ಕಾಲಿಕ)

ಆ) ಹೌದು.

ಇ) ಮೇಲೆ (ಅ)ದಲ್ಲಿ ತೋರಿಸಿದಂತೆ

ರೇಷ್ಮೆ ಆಮದು ಬಗ್ಗೆ

೩೮೬. **ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).**—ಮಾನ್ಯ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ರಾಜ್ಯದಲ್ಲಿ ರೇಷ್ಮೆ ನೆಲೆ ಹಾಗೂ ರೇಷ್ಮೆ ಕೈಗಾರಿಕೆ ಅಭಿವೃದ್ಧಿಗಾಗಿ ಕಳೆದ ೩ ವರ್ಷಗಳಲ್ಲಿ ಯಾವ ಹೊಸ ಯೋಜನೆ ಕೈಗೊಳ್ಳಲಾಗಿದೆ.

(ಆ) ಕಳೆದ ೩ ವರ್ಷಗಳಲ್ಲಿ ಚೀನಾ ಜಪಾನ್ ದೇಶಗಳಿಂದ ರೇಷ್ಮೆಯನ್ನು ಆಮದು ಮಾಡಿಕೊಳ್ಳಲಾಗಿದೆಯೆ?ದಯೆಯೇ?. ಹಾಗೂ ಆಮದು ಮಾಡಿಕೊಂಡ ಪ್ರಮಾಣವೆಷ್ಟು ?

(ಇ) ಈ ರೇಷ್ಮೆಯನ್ನು ವಿತರಣೆ ಮಾಡಿದ ವಿವರ ಒದಗಿಸುವುದು ?